

# ಕುಲುಮೆಯಲ್ಲಿ ಬದುಕು

ಕುಲುಮೆ ಕಸುಬಿನೊಂದಿಗೆ ಗುರ್ತಿಸಿಕೊಂಡ ಸಮುದಾಯ ಸಿಕ್ಕಲಗಾರರದು. ಹೈದರಾಬಾದ್ ನಿಜಾಮರ ಕಾಲದಲ್ಲಿ ತಮ್ಮ ಕಸುಬಿನಿಂದಾಗಿಯೇ ಬಹುಬೇಡಿಕೆ ಗಳಿಸಿದ್ದ ಸಮುದಾಯವಿದು. ಈಗ ಬದಲಾದ ಸಂದರ್ಭದಲ್ಲಿ, ತಾಂತ್ರಿಕ ಮತ್ತು ಸ್ಪರ್ಧಾತ್ಮಕ ಜಗತ್ತಿನೊಂದಿಗೆ ಹೊಂದಿಕೊಳ್ಳಲು ಸಿಕ್ಕಲಗಾರ ಸಮುದಾಯ ಹೆಣಗುತ್ತಿದೆ.

ಕುಲುಮೆಗಳಲ್ಲಿ ಕಬ್ಬಿಣವನ್ನು ಕಾಯಿಸಿ, ಕುಟ್ಟಿ ತಟ್ಟಿ, ಅದಕ್ಕೊಂದು ರೂಪ ನೀಡುವುದು ಸಿಕ್ಕಲಗಾರರ ವೃತ್ತಿ. ನಿಜಾಮರ ಅವಧಿಯಲ್ಲಿ ಸರ್ಕಾರದ ಕೊಪ್ಪರಿಗೆ, ಬೀದಿದೀಪಗಳು, ಸಾರೋಟು ಇತ್ಯಾದಿ ವಸ್ತುಗಳಿಗೆ 'ಸಿಕ್ಕಾ' ಹಾಕುವ ಕೆಲಸ ಇವರದಾಗಿತ್ತು. 'ಸಿಕ್ಕ' ಎಂದರೆ ಗುರುತು, ಮೊಹರು ಎಂದರ್ಥ. ಈ 'ಸಿಕ್ಕ'ದೊಂದಿಗೆ ತಳುಕು ಹಾಕಿಕೊಂಡ ಸಮುದಾಯಕ್ಕೆ 'ಸಿಕ್ಕಲಗಾರ್' ಎನ್ನುವ ಹೆಸರು ಬಂತು.

ಸಿಕ್ಕಲಗಾರರು ನಿಜಾಮರ ಸೈನಿಕರಿಗೆ ಬೇಕಾಗುವ ಆಯುಧಗಳನ್ನು ತಯಾರಿಸುತ್ತಿದ್ದರು. ಕೃಷಿಕರಿಗೆ ಬೇಕಾಗುತ್ತಿದ್ದ ನೇಗಿಲು, ಕುಳ, ಮಡಿಕೆ, ಕೊಡಲಿ, ಗುದ್ದಲಿ, ಹಾರೆ, ಬಂಡಿ ಗಾಲಿ, ಇರುಸುಗಳ ತಯಾರಿಕೆಯಲ್ಲೂ ಅವರು ಸಿದ್ಧಹಸ್ತರಾಗಿದ್ದರು.

ಸಿಕ್ಕಲಗಾರರು ಕಬ್ಬಿಣ ತಯಾರಿಸುವುದಿಲ್ಲ. ಕುಲುಮೆಗಳಲ್ಲಿ ಕಬ್ಬಿಣವನ್ನು ಹದಗೊಳಿಸಿ, ಅದಕ್ಕೆ ಅವಶ್ಯಕ ರೂಪ ನೀಡುತ್ತಾರಷ್ಟೇ. ಕಬ್ಬಿಣದ ಕೆಲಸ ಮಾಡುವ ಕಮ್ಮಾರರು ನಾಡಿನ ಎಲ್ಲೆಡೆ ಇದ್ದಾರಷ್ಟೇ. ಸಿಕ್ಕಲಗಾರರು ಮಾಡುವುದು ಕೂಡ ಕಬ್ಬಿಣದ ಕೆಲಸವನ್ನೇ ಆದರೂ, ಈ ಸಮುದಾಯ ಹೈದರಾಬಾದ್ ನಿಜಾಮರ ಪ್ರಭಾವಲಯಕ್ಕಷ್ಟೇ ಸೀಮಿತವಾಗಿದೆ. ನಿಜಾಮರ ಕಾಲದಲ್ಲಿ ಕುಲುಮೆ ಕೆಲಸದಲ್ಲಿ ತೊಡಗಿದ್ದ ಮುಸ್ಲಿಂಮರೇ 'ಸಿಕ್ಕಲುಗಾರರು'.

ಎರಡುಮೂರು ದಶಕಗಳ ಹಿಂದೆ ಕೊಪ್ಪಳ ನಗರವೊಂದರಲ್ಲೇ ಸುಮಾರು 30

